# ಕರಪತ್ರ

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಬೇಕಾದ ಮಾಹಿತಿ/ದಾಖಲೆಗಳು

ರಾಜ್ಯದಲ್ಲಿ ಏಕೀಕೃತ ವಿದ್ಯಾರ್ಥಿವೇತನ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು ಈ ತಂತ್ರಾಂಶದಲ್ಲಿ ಮೆಟ್ರಿಕ್ ಪೂರ್ವವಿದ್ಯಾರ್ಥಿವೇತನ ಯೋಜನೆಗಳಿಗೆ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ, ಸದರಿ ತಂತ್ರಾಂಶದಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಯೋಜನೆಗಳನ್ನು ನಿರ್ವಹಿಸಲಾಗುವುದು. ಸದರಿ ಯೋಜನೆಗಳಡಿ ಸೌಲಭ್ಯಗಳನ್ನು ಪಡೆಯಲು ಅರ್ಜಿದಾರರು ತಮ್ಮ ಆಧಾರ್/ಇ.ಐ.ಡಿ ಸಂಖ್ಯೆಗಳನ್ನು ಕಡ್ಡಾಯವಾಗಿ ನೀಡಬೇಕು. ಹೀಗೆ ನೀಡಿದ ಆಧಾರ್ ಸಂಖ್ಯೆಗಳನ್ನು ಗುರುತು ದೃಢಪಡಿಸಿಕೊಳ್ಳಲು, ನೇರ ನಗದು ವರ್ಗಾವಣೆಗಾಗಿ ಬಳಸಲು ಮತ್ತು SATS ದತ್ತಾಂಶದಲ್ಲಿ ಅಳವಡಿಸಲು ಅನುಮತಿಯನ್ನು ಅರ್ಜಿದಾರರು ನೀಡಬೇಕು.

| | | | |
|---|---|---|---|
| 1. | ವಿದ್ಯಾರ್ಥಿವೇತನ ತಂತ್ರಾಂಶದ ಐ.ಡಿ | ssp.karnataka.gov.in | |
| 2. | ವಿದ್ಯಾರ್ಥಿಯ ಸ್ಯಾಟ್ಸ್ ಐ.ಡಿ | ಶಿಕ್ಷಕರು ಕೆಳಗಿನ ಮಾಹಿತಿ ಭರ್ತಿ ಮಾಡಿ ಪ್ರತಿ ವಿದ್ಯಾರ್ಥಿಗೆ ನೀಡಬೇಕು | |
| | | SATS-ID | |
| | | ವಿದ್ಯಾರ್ಥಿಯ ಹೆಸರು | |

3. ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆ/ ಮಾಹಿತಿಗಳು

- ವಿದ್ಯಾರ್ಥಿಯ SATS-ID
- ಪೋಷಕರ ಮೊಬೈಲ್ ಸಂಖ್ಯೆ
- ವಿದ್ಯಾರ್ಥಿಯ ಆಧಾರ್/ ಇ.ಐ.ಡಿ ಸಂಖ್ಯೆ ಆಧಾರ್/ ಇ.ಐ.ಡಿ ಯಲ್ಲಿ ನಮೂದಿಸಿರುವಂತೆ ಹೆಸರು
- ಪೋಷಕರ ಆಧಾರ್/ ಇ.ಐ.ಡಿ ಸಂಖ್ಯೆ ಆಧಾರ್/ ಇ.ಐ.ಡಿ ಯಲ್ಲಿ ನಮೂದಿಸಿರುವಂತೆ ಹೆಸರು
- ವಿದ್ಯಾರ್ಥಿಯ ಆಧಾರ್ ಇಲ್ಲದಿದ್ದಲ್ಲಿ, ವಿದ್ಯಾರ್ಥಿಯ ಬ್ಯಾಂಕ್ ಖಾತೆಯ ವಿವರಗಳು (ವಿದ್ಯಾರ್ಥಿಯ ಹೆಸರು, ಬ್ಯಾಂಕ್ ವಿಳಾಸ,ಐ.ಎಫ್.ಎಸ್.ಸಿ ಕೋಡ್, ಖಾತೆ ಸಂಖ್ಯೆ)
- ವಿದ್ಯಾರ್ಥಿಯ ಹೆಸರಿನಲ್ಲಿ ನೀಡಲಾದ ಗಣಕೀಕೃತ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು
- ಈಗಾಗಲೇ ವಿದ್ಯಾರ್ಥಿವೇತನ ಪಡೆಯುತ್ತಿದ್ದಲ್ಲಿ e-pass/NSP/SMIS ID ಸಂಖ್ಯೆ
- ವಸತಿ ನಿಲಯಾರ್ಥಿಯಾಗಿದ್ದಲ್ಲಿ ವಸತಿ ನಿಲಯ ನಿರ್ವಹಣೆ ತಂತ್ರಾಂಶದ ನೊಂದಣಿ ಸಂಖ್ಯೆ ( HMIS/e-pass ID)

4. ಆಧಾರ್/ ಇ.ಐ.ಡಿ ಸಂಖ್ಯೆಗಳನ್ನು ನೀಡುವ ಮೊದಲು ಗಮನಿಸಬೇಕಾದ ಅಂಶಗಳು

- ವಿದ್ಯಾರ್ಥಿಯ ಮತ್ತು ಪೋಷಕರ ಆಧಾರ್ ಈಗಾಗಲೇ ಪಡೆದಿದ್ದಲ್ಲಿ ಕಡ್ಡಾಯವಾಗಿ ನೀಡಬೇಕು
- ಇಲ್ಲದಿದಲ್ಲಿ, ಆಧಾರ್‌ಗಾಗಿ ನೋದಾಯಿಸಿಕೊಂಡು ಇ.ಐ.ಡಿ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನೀಡಬೇಕು. ಆಧಾರ್ ನೋಂದಣಿ ಕಛೇರಿ/ಗ್ರಾಮ ಪಂಚಾಯಿತಿ ಕಛೇರಿಗಳಿಗೆ ಬೇಟಿ ನೀಡಿ ಆಧಾರ್ ನೋಂದಣಿ ಮಾಡಿಕೊಳ್ಳುವುದು.
- ಆಧಾರ್ ಮತು ಇ.ಐ.ಡಿ ದಾಖಲೆಯಲ್ಲಿ ಇರುವ ಹೆಸರು ಯಥಾವತ್ತಾಗಿ ಅರ್ಜಿ & ಅನುಮತಿ ಪತ್ರದಲ್ಲಿ ನಮೂದಿಸಬೇಕು
- ಆಧಾರ್ ಬಳಸಲು ಇ-ಅನುಮತಿ ಇ-ಸಹಿ ಮೂಲಕ ನೀಡಲು, ಆಧಾರ್ ಸಂಖ್ಯೆಗೆ ನೋಂದಣಿಯಾದ ಮೊಬೈಲ್ ಸಂಖ್ಯೆ ತಿಳಿದಿರಬೇಕು
- ಆಧಾರ್ ಸಂಖ್ಯೆಗೆ ನೋಂದಣಿಯಾದ ಮೊಬೈಲ್ ಸಂಖ್ಯೆ ಗೊತ್ತಿಲ್ಲದಿದ್ದಲ್ಲಿ https://resident.uidai.gov.in/aadhaarverification ಪರಿಶೀಲಿಸಬವುದಾಗಿದೆ ಅಥವಾ "ಆಧಾರ್ ನೋಂದಣಿ ಕೇಂದ್ರಕ್ಕೆ" ಭೇಟಿ ನೀಡಿ ಪರಶೀಲಿಸಿ ಅಗತ್ಯವಿದ್ದಲ್ಲಿ ತದ್ದುಪಡಿ ಮಾಡಿಕೊಳ್ಳಬಹುದು.

4. ವಿವರಗಳಿಗೆ ಸಂಪರ್ಕಿಸಬೇಕಾದ ಅಧಿಕಾರಿಗಳು:
   1. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ತಾಲ್ಲೂಕು ಕಲ್ಯಾಣಾಧಿಕಾರಿ.
   2. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ.
   3. ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ/ ತಾಲ್ಲೂಕು ಪರಿಶಿಷ್ಟ ಪಂಗಡ ವಿಸ್ತರಣಾಧಿಕಾರಿ.
   4. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ತಾಲ್ಲೂಕು ವಿಸ್ತರಣಾಧಿಕಾರಿಗಳು/ಕ್ಷೇತ್ರ ಶಿಕ್ಷಣಾಧಿಕಾರಿಗಳು.

**ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಸಲ್ಲಿಸಿರುವ ಆಧರ್/ಇ.ಐ.ಡಿ ಸಂಖ್ಯೆಗಳನ್ನು ಉಪಯೋಗಿಸಲು ಪೋಷಕರು ನೀಡಬೇಕಾಗಿರುವ ಅನುಮತಿ ಪತ್ರ**

ವಿದ್ಯಾರ್ಥಿಯ SATS ಸಂಖ್ಯೆ:............................ ಅರ್ಜಿ ಸಲ್ಲಿಸಿದ ದಿನಾಂಕ:

*ದಯವಿಟ್ಟು ಗಮನಿಸಿ!! ಆಧಾರ್ ಸಂಖ್ಯೆಯಲ್ಲಿ 12 ಅಂಕಿಗಳಿವೆ (xxxx/xxxxx/xxxxx) ಮತ್ತು ಇ.ಐ.ಡಿ ಸಂಖ್ಯೆಯಲ್ಲಿ 15 ಅಂಕಿಗಳು ದಿನಾಂಕ ಮತ್ತು ಸಮಯದ ವಿವರಗಳಿವೆ (xxxx/xxxxx/xxxxx) dd/mm/yyyy hh.mm.ss*

ನಿಮಗೆ ಅನ್ವಯಿಸುವ ಅನುಮತಿ ಪತ್ರವನ್ನು ಆಯ್ಕೆ ಮಾಡಿ:

**ವಿದ್ಯಾರ್ಥಿಯ ಮತ್ತು ಪೋಷಕರ ಆಧಾರ್ ಸಂಖ್ಯೆ ಅರ್ಜಿಯಲ್ಲಿ ನೀಡಿದಲ್ಲಿ**

ನಾನು ನನ್ನ ___/___/_____ ಮತ್ತು ನನ್ನ ಮಗುವಿನ ಆಧಾರ್ ___/___/_____ಸಂಖ್ಯೆಗಳನ್ನು ವಿದ್ಯಾರ್ಥಿವೇತನ ಪಡೆಯಲು ಸಲ್ಲಿಸಿರುವ ಅರ್ಜಿಯೊಂದಿಗೆ ನೀಡಿದ್ದು ಸದರಿ ಆಧಾರ್ ಸಂಖ್ಯೆಗಳನ್ನು ಗುರುತು ಪಡಿಸಲು, ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಮತ್ತು ನನ್ನ ಮಗುವಿನ ಆಧಾರ್ ಸಂಖ್ಯೆಯನ್ನು SATS ದತ್ತಾಂಶದಲ್ಲಿ ಅಳವಡಿಸಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ.

**ಪೋಷಕರ ಆಧಾರ್ ಸಂಖ್ಯೆ ಮಾತ್ರ ಅರ್ಜಿಯಲ್ಲಿ ನೀಡಿದಲ್ಲಿ**

ನಾನು ನನ್ನ ಆಧಾರ್ ___/___/_____ಸಂಖ್ಯೆಯನ್ನು ಮತ್ತು ನನ್ನ ಮಗುವಿನ ಇ.ಐ.ಡಿ ___/___/_____ ___/___/_____ಸಂಖ್ಯೆಯನ್ನು ವಿದ್ಯಾರ್ಥಿವೇತನ ಪಡೆಯಲು ಸಲ್ಲಿಸಿರುವ ಅರ್ಜಿಯೊದಿಗೆ ನೀಡಿದ್ದು ಸದರಿ ಆಧಾರ್ ಸಂಖ್ಯೆಯನ್ನು ಗುರುತು ಪರಿಶೀಲಿಸಲು, ಮತ್ತು ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ. ಮುಂದುವರೆದು, ನನ್ನ ಮಗುವಿನ ಇ.ಐ.ಡಿ ಸಂಖ್ಯೆಯನ್ನು ಸಂಬಂಧಿಸಿದ ಆಧಾರ್ ಸಂಖ್ಯೆ ಪಡೆಯಲು ಮತ್ತು ಹೀಗೆ ಪಡೆದ ಆಧಾರ್ ಸಂಖ್ಯೆಯನ್ನು ಗುರುತು ಪರಿಶೀಲಿಸಲು, ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಮತ್ತು SATS ದತ್ತಾಂಶದಲ್ಲಿ ಅಳವಡಿಸಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ.

**ವಿದ್ಯಾರ್ಥಿಯ ಆಧಾರ್ ಸಂಖ್ಯೆ ಮಾತ್ರ ಅರ್ಜಿಯಲ್ಲಿ ನೀಡಿದಲ್ಲಿ**

ನಾನು, ನನ್ನ ಮಗುವಿನ ಆಧಾರ್___/___/_____ಸಂಖ್ಯೆಯನ್ನು ಮತ್ತು ನನ್ನ ಇ.ಐ.ಡಿ___/___/_____ ___/___/_____ಸಂಖ್ಯೆಯನ್ನು ವಿದ್ಯಾರ್ಥಿವೇತನ ಪಡೆಯಲು ಸಲ್ಲಿಸಿರುವ ಅರ್ಜಿಯೊದಿಗೆ ನೀಡಿದ್ದು ಸದರಿ ಆಧಾರ್ ಸಂಖ್ಯೆಯನ್ನು ಗುರುತು ಪರಿಶೀಲಿಸಲು, ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಮತ್ತು SATS ದತ್ತಾಂಶದಲ್ಲಿ ಅಳವಡಿಸಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ. ಮುಂದುವರೆದು, ನನ್ನ ಇ.ಐ.ಡಿ ಸಂಖ್ಯೆಯನ್ನು ಸಂಬಂಧಿಸಿದ ಆಧಾರ್ ಸಂಖ್ಯೆ ಪಡೆಯಲು ಮತ್ತು ಹೀಗೆ ಪಡೆದ ಆಧಾರ್ ಸಂಖ್ಯೆಯನ್ನು ಗುರುತು ಪರಿಶೀಲಿಸಲು, ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ.

**ವಿದ್ಯಾರ್ಥಿಯ ಮತ್ತು ಪೋಷಕರ ಇ.ಐ.ಡಿ ಸಂಖ್ಯೆ ಅರ್ಜಿಯಲ್ಲಿ ನೀಡಿದಲ್ಲಿ**

ನಾನು, ನನ್ನ___/___/_____ ___/___/_____ನನ್ನ ಮಗುವಿನ ಇ.ಐ.ಡಿ ___/___/_____ ___/___/_____ ಸಂಖ್ಯೆಗಳನ್ನು ವಿದ್ಯಾರ್ಥಿವೇತನ ಪಡೆಯಲು ಸಲ್ಲಿಸಿರುವ ಅರ್ಜಿಯೊದಿಗೆ ನೀಡಿದ್ದು ಸದರಿ ಇ.ಐ.ಡಿ ಸಂಖ್ಯೆಗಳಿಗೆ ಸಂಬಂಧಿಸಿದ ಆಧಾರ್ ಸಂಖ್ಯೆ ಪಡೆಯಲು ಮತ್ತು ಹೀಗೆ ಪಡೆದ ಆಧಾರ್ ಸಂಖ್ಯೆಯನ್ನು ಗುರುತು ಪರಿಶೀಲಿಸಲು, ಬ್ಯಾಂಕ್ ಖಾತೆಗೆ ನೇರವಾಗಿ ನಗದು ಪಾವತಿ ಮಾಡಲು ಉಪಯೋಗಿಸಿಕೊಳ್ಳಲು ಮತ್ತು ನನ್ನ ಮಗುವಿನ ಆಧಾರ್ ಸಂಖ್ಯೆಯನ್ನು SATS ದತ್ತಾಂಶದಲ್ಲಿ ಅಳವಡಿಸಲು ಅನುಮತಿ ನೀಡಿರುತ್ತೇನೆಂದು ಧೃಢೀಕರಿಸುತ್ತೇನೆ.

**ಪೋಷಕರ ಸಹಿ:**

ವಿದ್ಯಾರ್ಥಿಯ ಹೆಸರು:
SATS ಸಂಖ್ಯೆ:
ಜಾತಿ ಪ್ರಮಾಣ ಪತ್ರದ ಸಂಖ್ಯೆ
ನವೀಕರಣ ವಿದ್ಯಾರ್ಥಿಯಾದಲ್ಲಿ
ಹಿಂದಿನ ವಿ. ವೇ. ನೋಂದಣಿ ಸಂಖ್ಯೆ
ವಿಳಾಸ

ಪೋಷಕರ ಹೆಸರು:
ದೂರವಾಣಿ ಸಂಖ್ಯೆ:
ಆದಾಯ ಪ್ರಮಾಣ ಪತ್ರದ ಸಂಖ್ಯೆ
ವಸತಿ ನಿಲಯಾರ್ಥಿಯಾದಲ್ಲಿ ವಸತಿ
ನಿಲಯನೋಂದಣಿ ಸಂಖ್ಯೆ
ಪಿನ್ ಕೋಡ್